**ಪ್ರಧಾನ ಸಿವಿಲ್?ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

ಸಿ.ಸಿ.137/2020

| | | |
|---|---|---|
| ಸಾಕ್ಷಿದಾರರ ಹೆಸರು | - ಮರಿದೇವರು | ಚಾ ಸಾ -1 |
| ತಂದೆಯ ಹೆಸರು | - ಚಿಕ್ಕಮಾದಯ್ಯ | ಪ್ರಾ ಸಾ -1 |
| ವಯಸ್ಸು | - 46 ವರ್ಷ | |
| ಉದ್ಯೋಗ | - ಮಾಜಿ ಪುರಸಭಾ ಸದಸ್ಯರು | |
| ವಾಸ ಸ್ಥಳ | - ಮದ್ದೂರು | |

ದಿನಾಂಕಃ 11.09.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ಚಾಸಾ-2 ರಿಂದ 10 ರವರು ಕೆ ಎಸ್ ಅರ್ ಟಿ ಸಿ ಬಸ್ಸಿನಲ್ಲಿ ಸಹಪ್ರಯಾಣಿಕರಾಗಿದ್ದರು.

2018 ನೇ ಸಾಲಿನಲ್ಲಿ ಒಂದು ದಿನ ಮದ್ದೂರಿನಿಂದ ಮಂಡ್ಯಕ್ಕೆ ಕೆ ಎಸ್ ಅರ್ ಟಿ ಸಿ ಬಸ್ಸಿನಲ್ಲಿ ಹೋಗುತ್ತಿದ್ದು ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ಹೋಗುತ್ತಿದ್ದಾಗ ಸಂಜೆ 5.30-5.45 ಗಂಟೆ ಸಮಯದಲ್ಲಿ ನಾವು ಪ್ರಯಾಣಿಸುತ್ತಿದ್ದ ಕೆ ಎಸ್ ಅರ್ ಟಿ ಸಿ ಬಸ್ಸಿನ ಚಾಲಕ ತನ್ನ ಬಸ್ಸನ್ನು ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಮುಂದೆ ಹೋಗುತ್ತಿದ್ದ ಮತ್ತೊಂದು ಕೆ ಎಸ್ ಅರ್ ಟಿ ಸಿ ಬಸ್ಸನ್ನು ಹಿಂದಿಕ್ಕಲು ಎಡಭಾಗದಿಂದ ಬಸ್ಸನ್ನು ಚಾಲನೆ ಮಾಡಿದಾಗ, ಎಡಭಾಗದಲ್ಲಿ ಒಂದು ಖಾಸಗೀ ಬಸ್ಸು ಇದ್ದು ಅದಕ್ಕೆ ಡಿಕ್ಕಿ ಪಡಿಸಿರುತ್ತಾರೆ.

ನಾನು ಬಸ್ಸಿನಲ್ಲಿ ಚಾಲಕನ ಸೀಟಿನ ಎಡಭಾಗದಲ್ಲಿ ಮೊದಲನೇ ಸೀಟಿನಲ್ಲಿ ಕುಳಿತಿದ್ದೇನು. ನನ್ನ ಪಕ್ಕ ಚಾಸಾ-2 ರವರು ಕುಳಿತಿದ್ದರು. ಸದರಿ ಅಪಘಾತದಲ್ಲಿ ನನ್ನ ತಲೆಗೆ, ಮಂಡಿಗೆ, ಮೊಣಕಾಲಿಗೆ ಏಟಾಗಿರುತ್ತದೆ. ಚಾಸಾ-2 ಮತ್ತು ಇತರರಿಗೆ ಪೆಟ್ಟಾಗಿರುತ್ತದೆ. ಅಪಘಾತವಾದ ನಂತರ ಚಾಲಕ ಮತ್ತು ನಿರ್ವಾಹಕರಿಬ್ಬರು ಅಲ್ಲಿಂದು ಹೊರಟು ಹೋದರು. ನಂತರ ಮಂಡ್ಯ ಸರ್ಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಾನು ಅಸ್ಪತ್ರೆಯಲ್ಲಿದ್ದಾಗ ಪೊಲೀಸರು ಬಂದು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

ಈಗ ನೋಡುತ್ತಿರುವ ಸಹಿ ನನ್ನದೇ. ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಹೇಳಿಕೆಯನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ಸದರಿ ದಿನ ಪ್ರಯಾಣಿಸುತ್ತಿದ್ದ ಬಸ್ಸಿನ ನೊಂದಣಿ ಸಂಖ್ಯೆ ಕೆಎ-09-ಎಫ್-1580 ಇರಬಹುದು, ನಿಖರವಾಗಿ ನೆನಪಿಲ್ಲ. ಸದರಿ ದಿನ ನಾನು ಪ್ರಯಾಣಿಸುತ್ತಿದ್ದ ಬಸ್ಸನ್ನು ಚಾಲನೆ ಮಾಡಿದ ವ್ಯಕ್ತಿಯನ್ನು ಗುರುತಿಸಬಲ್ಲೆ. ಆರೋಪಿ ಗೈರು ಹಾಜರಿದ್ದು, ಗುರುತಿನ ಬಗ್ಗೆ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ಸಲ್ಲಿಸುತ್ತಾರೆ. ಅಪಘಾತವಾದ ನಂತರ ಆರೋಪಿ ಬಸ್ಸಿನ ಬಾಗಿಲು ತೆಗೆದು ಹೋಗುತ್ತಿದ್ದಾಗ ನಾನು ಅವರನ್ನು ನೋಡಿರುತ್ತೇನೆ.

ಸದರಿ ಅಪಘಾತದ ಸಮಯದಲ್ಲಿ ನಮ್ಮ ಬಸ್ಸು ಡಿಕ್ಕಿ ಪಡಿಸಿದಾಗ ಹಿಂದಿನಿಂದ ಎರಡು ಕಾರುಗಳು ನಾವು ಪ್ರಯಾಣಿಸುತ್ತಿದ್ದ ಬಸ್ಸಿಗೆ ಡಿಕ್ಕಿ ಪಡಿಸಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ.ಎಂ ಎಂ ಎಂ. ವಕೀಲರಿಂದಃ**

ನಾನು ಸದರಿ ದಿನ ಕೆ ಎಸ್ ಆರ್ ಟಿ ಸಿ ಬಸ್ಸು ನಿಲ್ದಾಣದಲ್ಲಿ ಬಸ್ಸನ್ನು ಹತ್ತಿರುತ್ತೇನೆ. ಸದರಿ ದಿನ ಬಸ್ಸಿನಲ್ಲಿ ಸುಮಾರು 35 ಜನ ಪ್ರಯಾಣಿಕರು ಇದ್ದರು. 19-20 ಜನಕ್ಕೆ ಅಪಘಾತದಲ್ಲಿ ಗಾಯಗಳಾಗಿರುತ್ತದೆ. ಸದರಿ ರಸ್ತೆ ನಾಲ್ಕು ಪಥಗಳ ರಸ್ತೆ ಎಂದರೆ ಸರಿಯಲ್ಲ, ಆಗ 2 ಪಥಗಳು ಇದ್ದವು. ಸದರಿ ರಸ್ತೆಯಲ್ಲಿ ಏಕ ಕಾಲದಲ್ಲಿ 2 ವಾಹನಗಳು ಪಕ್ಕ ಪಕ್ಕ ಹೋಗಬಹುದು ಎಂದರೆ ಸರಿ. ಸದರಿ ದಿನ ಬಹಳಷ್ಟು ವಾಹನಗಳು ಇರಲ್ಲಿ, ಮುಂದೆ ಒಂದು ಕೆ ಎಸ್ ಆರ್ ಟಿ ಸಿ ಬಸ್ಸು ಹೋಗುತ್ತಿತ್ತು. ಸದರಿ ಬಸ್ಸಿನ ನೊಂದಣಿ ಸಂಖ್ಯೆಯನ್ನು ನಾನು ನೋಡಿರುವುದಿಲ್ಲ. ಸದರಿ ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಡಿಕ್ಕಿಯಾಗಿರುವುದಿಲ್ಲ. ಖಾಸಗೀ ಬಸ್ಸಿನ ನೊಂದಣಿ ಸಂಖ್ಯೆ ನನಗೆ ಈಗ ಹೇಳಲು ಆಗುವುದಿಲ್ಲ. ಸುಮಾರು 80-90 ಕಿ ಮೀ ವೇಗದಲ್ಲಿ ನಾನು ಪ್ರಯಾಣಿಸುತ್ತಿದ್ದ ಬಸ್ಸು ಹೋಗುತ್ತಿತು. ಖಾಸಗೀ ಬಸ್ಸು ಎಷ್ಟು ವೇಗದಲ್ಲಿ ಹೋಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಿನ ಖಾಸಗೀ ಬಸ್ಸು ಏಕಾ ಏಕಿ ಸೂಚನೆ ಇಲ್ಲದೇ ಬ್ರೇಕ್ ಹಾಕಿದ ಕಾರಣ ನಿಯಂತ್ರಣ ತಪ್ಪಿ ನಮ್ಮ ಬಸ್ಸು ಅದಕ್ಕೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತ ಖಾಸಗೀ ಬಸ್ಸಿನ ಚಾಲಕನ ತಪ್ಪಿನಿಂದ ಅಗಿರುತ್ತದೆ, ಆರೋಪಿಯ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಖಾಸಗೀ ಬಸ್ಸಿಗೆ ವಿಮೆ ಇಲ್ಲದ ಕಾರಣ ಪರಿಹಾರ ಪಡೆಯಲು ಆರೋಪಿಯ ವಿರುದ್ದ ಈ ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದೇನು. ಆರೋಪಿಯ ತಪ್ಪಿನಿಂದ

ಅಪಘಾತವಾಗದೇ ಇದ್ದರೂ ಸಹ ಸಾಧ್ಯವಾದರೆ ಪರಿಹಾರ ಪಡೆಯಬಹುದೆಂಬ ಉದ್ದೇಶದಿಂದ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೇ ನೋವಿನಲ್ಲಿದ್ದ ಕಾರಣ ಡಿಕ್ಕಿ ಪಡಿಸಿದ ಕಾರಿನ ನೊಂದಣಿ ಸಂಖ್ಯೆ ನೋಡಲು ಆಗಿರುವುದಿಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ